# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 690 |
| ಉತ್ತರಿಸಬೇಕಾದ ದಿನಾಂಕ | : | 17.12.2021 |
| ಸದಸ್ಯರ ಹೆಸರು | : | ಶ್ರೀ ಸಿ.ಎಂ.ಇಬ್ರಾಹಿಂ,<br>(ವಿಧಾನಸಭಾಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಕ್ರೀಡಾಭಿವೃದ್ಧಿಗೆ ಕೈಗೊಂಡಿರುವ ಯೋಜನೆಗಳು ಯಾವುವು; (ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಕ್ರೀಡಾಭಿವೃದ್ಧಿಗೆ ಕೈಗೊಂಡಿರುವ ಯೋಜನೆಗಳ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಆ | ಸದರಿ ಯೋಜನೆಗಳಿಗೆ ಮೀಸಲಿಟ್ಟ ಅನುದಾನ ಅನುದಾನ ಮತ್ತು ಬಿಡುಗಡೆ ಮಾಡಿರುವ ಅನುದಾನವೆಷ್ಟು; (ಕ್ರೀಡೆವಾರು ಮಾಹಿತಿ ನೀಡುವುದು) | ಸದರಿ ಯೋಜನೆಗಳಿಗೆ ಕಳೆದ ಮೂರು ವರ್ಷಗಳಲ್ಲಿ ಮೀಸಲಿಟ್ಟ ಅನುದಾನ ಮತ್ತು ಬಿಡುಗಡೆ ಮಾಡಿರುವ ಅನುದಾನದ ವಿವರವನ್ನು ಅನುಬಂಧ-2ರಲ್ಲಿ ನೀಡಲಾಗಿದೆ. ಕ್ರೀಡೆವಾರು ಯಾವುದೇ ಅನುದಾನ ಬಿಡುಗಡೆ ಮಾಡುವುದಿಲ್ಲ. |
| ಇ | ಕಳೆದ ಮೂರು ವರ್ಷಗಳಲ್ಲಿ ಸರ್ಕಾರವು ಆಯೋಜಿಸಿರುವ ಕ್ರೀಡೆಗಳಾವುವು? (ಸಂಪೂರ್ಣ ಮಾಹಿತಿ ಒದಗಿಸುವುದು) | ಕಳೆದ ಮೂರು ವರ್ಷಗಳಲ್ಲಿ ಸರ್ಕಾರವು ಆಯೋಜಿಸಿರುವ ಕ್ರೀಡಾಕೂಟಗಳ ವಿವರವನ್ನು ಅನುಬಂಧ-3 ರಲ್ಲಿ ನೀಡಲಾಗಿದೆ. |

**ವೈಎಸ್‌ಡಿ/ಇಬಿಬಿ/195/2021**

**(ಡಾ. ನಾರಾಯಣಗೌಡ)**
ರೇಷ್ಮೆ, ಯುವ ಸಬಲೀಕರಣ ಮತ್ತು
ಕ್ರೀಡಾ ಸಚಿವರು.

# ಅನುಬಂಧ-01

## ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

**ರಾಜ್ಯ ಸರ್ಕಾರವು ಕಳೆದ ಮೂರು ವರ್ಷಗಳಿಂದ ಕ್ರೀಡಾಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳ ವಿವರಗಳು ಈ ಕೆಳಕಂಡಂತಿದೆ.**

- **ನಗದು ಪುರಸ್ಕಾರ:** ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ವಿಜೇತರಾದ ಕ್ರೀಡಾಪಟುಗಳಿಗೆ ನಗದು ಪುರಸ್ಕಾರವನ್ನು ನೀಡಲಾಗುತ್ತಿದೆ.
- **ಏಕಲವ್ಯ ಪ್ರಶಸ್ತಿ :** ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಏಕಲವ್ಯ ಪ್ರಶಸ್ತಿ ನೀಡಲಾಗುವುದು.
- **ಜೀವಮಾನ ಸಾಧನೆ ಪ್ರಶಸ್ತಿ** : ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಿಗೆ ತರಬೇತಿ ನೀಡಿದ ರಾಜ್ಯದ ತರಬೇತುದಾರರಿಗೆ ಅವರ ಜೀವಮಾನ ಸಾಧನೆಗೆ ಪ್ರಶಸ್ತಿ ನೀಡಲಾಗುವುದು.
- **ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿ:** ದೇಸೀ ಗ್ರಾಮೀಣ ಕ್ರೀಡೆಗಳಲ್ಲಿ ವಿಶೇಷ ಸಾಧನೆ ಮಾಡಿದ ರಾಜ್ಯದ ಗ್ರಾಮೀಣ ಕ್ರೀಡಾಪ್ರತಿಭೆಗಳಿಗೆ ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿ ಹಾಗೂ ನಗದನ್ನು ನೀಡಿ ಗೌರವಿಸಲಾಗುವುದು.
- **ಶೈಕ್ಷಣಿಕ ಶುಲ್ಕ ಮರುಪಾವತಿ** : ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ರಾಜ್ಯದಿಂದ ಪ್ರತಿನಿಧಿಸಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಶೈಕ್ಷಣಿಕ ಶುಲ್ಕ ಮರು ಪಾವತಿ ಮಾಡಲಾಗುತ್ತಿದೆ.
- **ಕ್ರೀಡಾ ವಿದ್ಯಾರ್ಥಿ ವೇತನ**: ರಾಜ್ಯಮಟ್ಟದಲ್ಲಿ ಪದಕ ವಿಜೇತರಾಗಿ ರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ರೂ.10,000/- ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.
- ಪರಿಶಿಷ್ಟ ಜಾತಿ ಮತ್ತು ಪಂಗಡದ ಸಾಧಕ ಕ್ರೀಡಾಪಟುಗಳಿಗೆ ವಿಶೇಷ ನಗದು ಪುರಸ್ಕಾರ ವಿತರಿಸಲಾಗುತ್ತಿದೆ. ಅಂತರ-ರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಕ್ರೀಡಾಕೂಟಗಳ ಪದಕ ವಿಜೇತರಿಗೆ ಕ್ರಮವಾಗಿ ತಲಾ ರೂ.5.00, 3.00 ಮತ್ತು 1.00 ಲಕ್ಷಗಳ ನಗದು ಪುರಸ್ಕಾರ ನೀಡಲಾಗುತ್ತಿದೆ.
- ಅಂತರಾಷ್ಟ್ರೀಯ/ ರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಜಿಮ್ ಸಾಮಗ್ರಿಗಳನ್ನು ನೀಡಲಾಗುತ್ತಿದೆ.
- ಕ್ರೀಡಾ ವಸತಿ ಶಾಲೆ/ ನಿಲಯಗಳಲ್ಲಿ ಪ್ರವೇಶ ಪಡೆಯುವ ಪ್ರತಿಭಾವಂತ ಯುವ ಕ್ರೀಡಾಪಟುಗಳಿಗೆ ಉಚಿತ ಊಟೋಪಹಾರ, ವಸತಿ, ಕ್ರೀಡಾ ತರಬೇತಿ ಮತ್ತು ಕ್ರೀಡಾ ಸಮವಸ್ತ್ರ ಒದಗಿಸಲಾಗುತ್ತಿದೆ. ದೈಹಿಕ ಕ್ಷಮತಾ ಪರೀಕ್ಷೆಗಳಲ್ಲಿ ಹಾಗೂ ಕ್ರೀಡಾ ಕೌಶಲ್ಯ ಪರೀಕ್ಷೆ ಆಧಾರಿತವಾಗಿ 5ನೇ ತರಗತಿ ಮೇಲ್ಪಟ್ಟ ಕ್ರೀಡಾಪಟುಗಳಿಗೆ ಆಯ್ಕೆ ಪ್ರಕ್ರಿಯೆ ನಡೆಸಿ, ಪ್ರವೇಶಾವಕಾಶ ಕಲ್ಪಿಸಲಾಗುತ್ತಿದೆ.
- **ಕ್ರೀಡಾ ಮೂಲಭೂತ ಸೌಕರ್ಯಗಳ ಸೃಜನೆ:** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ನಿವೇಶನಗಳಲ್ಲಿ ಕ್ರೀಡಾ ಮೂಲ ಸೌಕರ್ಯಗಳನ್ನು ಸೃಜಿಸುವ ಮೂಲಕ ಕ್ರೀಡಾಪಟುಗಳ ಕ್ರೀಡಾ ತರಬೇತಿಗೆ ಉತ್ತೇಜನ ನೀಡಲಾಗುತ್ತಿದೆ.

ಅನುಬಂಧ-2

## ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಕಳೆದ 3 ವರ್ಷಗಳಲ್ಲಿ ಯೋಜನೆಗಳಿಗೆ ಮೀಸಲಿಟ್ಟ ಅನುದಾನ ಮತ್ತು ಬಿಡುಗಡೆ ಮಾಡಿರುವ ಅನುದಾನದ ವಿವರ.

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಲೆಕ್ಕ ಶೀರ್ಷಿಕೆ ಮತ್ತು ಯೋಜನೆಯ ಹೆಸರು | 2018-19ನೇ ಸಾಲಿಗೆ ಮೀಸಲಿಟ್ಟ ಅನುದಾನ | ಬಿಡುಗಡೆ ಮಾಡಿರುವ ಅನುದಾನ | 2019-20ನೇ ಸಾಲಿಗೆ ಮೀಸಲಿಟ್ಟ ಅನುದಾನ | ಬಿಡುಗಡೆ ಮಾಡಿರುವ ಅನುದಾನ | 2020-21ನೇ ಸಾಲಿಗೆ ಮೀಸಲಿಟ್ಟ ಅನುದಾನ | ಬಿಡುಗಡೆ ಮಾಡಿರುವ ಅನುದಾನ |
|---|---|---|---|---|---|---|---|
| 1 | 2204-00-102-2-03 ರಾಜ್ಯ / ರಾಷ್ಟ್ರ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿದ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಉತ್ತೇಜಿತ ವಿದ್ಯಾರ್ಥಿ ವೇತನ. | | | | | | |
| | 059 ಇತರೇ ಖರ್ಚು. ಅ. ಯುವಜನೋತ್ಸವ | 50.00 | 50.00 | 100.00 | 110.00 | 1.00 | 0.00 |
| | 117 ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ | 80.00 | 80.00 | 200.00 | 190.00 | 100.00 | 0.00 |
| | 117 ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಸಾಧನೆ ಮಾಡುವ ಎಲ್ಲಾ ಕ್ರೀಡಾಪಟುಗಳ ಶೈಕ್ಷಣಿಕ ಶುಲ್ಕ ಮರುಪಾವತಿ. | 130.00 | 130.00 | | | | |
| | **ಒಟ್ಟು** | **250.00** | **250.00** | **300.00** | **300.00** | **101.00** | **0.00** |
| 2 | 2204-00-104-0-02 051 ಸಾಮಾನ್ಯ ವೆಚ್ಚ | 0.00 | 0.00 | 0.00 | 10.00 | 10.00 | 10.00 |
| | 015 ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ 015 (ನಗದು ಪ್ರಶಸ್ತಿ) ಪೂರಕ ವೆಚ್ಚಗಳು | 400.00 | 400.00 | 700.00 | 70.00 | 700.00 | 700.00 |
| | **ಒಟ್ಟು** | **400.00** | **400.00** | **700.00** | **710.00** | **710.00** | **710.00** |
| 3 | 2204-00-104-0-25 051 ಸಾಮಾನ್ಯ ವೆಚ್ಚಗಳು, ಕ್ರೀಡಾ ಶಾಲೆ ಮತ್ತು ನಿಲಯಗಳು | 2000.00 | 2160.00 | 1700.00 | 1700.00 | 705.00 | 705.00 |
| | **ಒಟ್ಟು** | **2000.00** | **2160.00** | **1700.00** | **1700.00** | **705.00** | **705.00** |
| 4 | 2204-00-789-0-01 422 ವಿಶೇಷ ಘಟಕ ಯೋಜನೆ | 1812.00 | 1812.00 | 1178.00 | 1178.00 | 1000.00 | 1000.00 |
| 5 | 2204-00-796-0-01 423 ಗಿರಿಜನ ಉಪಯೋಜನೆ | 734.00 | 734.00 | 559.00 | 559.00 | 500.00 | 500.00 |
| | **ಒಟ್ಟು** | **2546.00** | **2546.00** | **1737.00** | **1737.00** | **2000.00** | **2000.00** |
| 6 | 4202-03-102-0-01 132, ರಾಜ್ಯ ಮಟ್ಟದ ಕ್ರೀಡಾಂಗಣ ನಿರ್ಮಾಣ | 2000.00 | 844.73 | 4750.00 | 1750.00 | 1250.00 | 1250.00 |
| 7 | 4202-03-102-0-03 386 ಬಂಡವಾಳ ವೆಚ್ಚ | 1500.00 | 1211.80 | 1900.00 | 2750.00 | 640.00 | 640.00 |
| | 422 ಪರಿಶಿಷ್ಟ ಜಾತಿ ಉಪಯೋಜನೆ | 80.00 | 80.00 | 80.00 | 80.00 | 48.00 | 48.00 |
| | 423 ಗಿರಿಜನ ಉಪಯೋಜನೆ | 20.00 | 20.00 | 20.00 | 20.00 | 12.00 | 12.00 |
| | **ಒಟ್ಟು** | **3600.00** | **1311.00** | **6750.00** | **4600.00** | **1950.00** | **1950.00** |

**ಅನುಬಂಧ- 03**

**ಕಳೆದ ಮೂರು ವರ್ಷಗಳಲ್ಲಿ ಸರ್ಕಾರದ ಅನುದಾನದ ಮೂಲಕ ಆಯೋಜಿಸಿರುವ ಪ್ರಮುಖ ಕ್ರೀಡಾಕೂಟಗಳ ವಿವರ**

| ಕ್ರಮ ಸಂಖ್ಯೆ | 2018-19 | 2019-20 | 2020-21 |
|---|---|---|---|
| 01 | ದಸರಾ ಸಿಎಂ ಕಪ್ ಕ್ರೀಡಾಕೂಟ [ದಿನಾಂಕ 10-10-2018 ರಿಂದ 16-10-2018 ರವರೆಗೆ ಮೈಸೂರಿನಲ್ಲಿ ] | ದಸರಾ ಸಿಎಂ ಕ್ರೀಡಾಕೂಟ [ದಿನಾಂಕ 29-09-2019 ರಿಂದ 04-10-2019 ರವರೆಗೆ ಮೈಸೂರಿನಲ್ಲಿ] | ರಾಜ್ಯಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ, [ದಿನಾಂಕ: 22-10-2021 ರಿಂದ 24-10-2021ರವರೆಗೆ ದಾವಣಗೆರೆ ಜಿಲ್ಲೆಯಲ್ಲಿ] |
| 02 | ಫೀಬಾ ಏಷ್ಯಾ 18 ವರ್ಷದೊಳಗಿನ ಮಹಿಳೆಯರ ಬಾಸ್ಕೆಟ್‌ಬಾಲ್ ಪಂದ್ಯಾವಳಿ [ದಿನಾಂಕ 28-10-2018 ರಿಂದ 04-11-2018 ರವರೆಗೆ ಬೆಂಗಳೂರಿನಲ್ಲಿ ] | ಫೀಭಾ ಏಷ್ಯಾ ಸೀನಿಯರ್ ಮಹಿಳೆಯರ ಬಾಸ್ಕೆಟ್‌ಬಾಲ್ ಪಂದ್ಯಾವಳಿ [ದಿನಾಂಕ 24-09-2019 ರಿಂದ 29-09-2019 ರವರೆಗೆ ಬೆಂಗಳೂರಿನಲ್ಲಿ] | -- |
| 03 | ಏಷ್ಯನ್ ಟೂರ್ 10 ಆರ್‌ಇಡಿ ಸ್ನೂಕರ್ ಪಂದ್ಯಾವಳಿ [ ದಿನಾಂಕ 24-04-2019 ರಿಂದ 25-04-2019 ರವರೆಗೆ ಬೆಂಗಳೂರಿನಲ್ಲಿ ] | 3ನೇ ಹಾಕಿ ಇಂಡಿಯಾ 5-ಎ ಸೈಡ್ ಸೀನಿಯರ್ ರಾಷ್ಟ್ರೀಯ ಪಂದ್ಯಾವಳಿ [ ದಿನಾಂಕ 18-09-2018 ರಿಂದ 23-09-2018 ರವರೆಗೆ ಬೆಂಗಳೂರಿನಲ್ಲಿ] | -- |
| 04 | ರಾಜ್ಯ ಮಟ್ಟದ ಸೀನಿಯರ್ ಮತ್ತು ಜೂನಿಯರ್ ಅಥ್ಲೆಟಿಕ್ಸ್ ಕ್ರೀಡಾಕೂಟ [ ದಿನಾಂಕ 03-09-2018 ರಿಂದ 05-09-2018 ರವರೆಗೆ, ದಕ್ಷಿಣ ಕನ್ನಡ ಜಿಲ್ಲೆ] | ಮಿನಿ ಒಲಿಂಪಿಕ್ಸ್ ಗೇಮ್ಸ್-2019 [ ದಿನಾಂಕ 03-02-2020 ರಿಂದ 09-02-2020 ರವರೆಗೆ ಬೆಂಗಳೂರಿನಲ್ಲಿ] | -- |
| 05 | ಬೆಂಗಳೂರು ಓಪನ್ ಎಟಿಪಿ ಟೆನ್ನಿಸ್ ಪಂದ್ಯಾವಳಿ [ ದಿನಾಂಕ 12-11-2018 ರಿಂದ 17-11-2018 ರವರೆಗೆ ಬೆಂಗಳೂರಿನಲ್ಲಿ ] | 10ನೇ ಏಷ್ಯನ್ ಏಜ್ ಗ್ರೂಪ್ ಈಜು ಪಂದ್ಯಾವಳಿ [ ದಿನಾಂಕ 27-09-2019 ರಿಂದ 02-10-2019 ಬೆಂಗಳೂರಿನಲ್ಲಿ ] | -- |
| 06 | 38ನೇ ರಾಷ್ಟ್ರೀಯ ಮಾಸ್ಟರ್ಸ್ ಅಥ್ಲೆಟಿಕ್ಸ್ ಪಂದ್ಯಾವಳಿ [ದಿನಾಂಕ 12-04-2018 ರಿಂದ 15-04-2018 ರವರೆಗೆ ಮಂಗಳೂರಿನಲ್ಲಿ] | ದಕ್ಷಿಣ ವಲಯ ಅಥ್ಲೆಟಿಕ್ಸ್ ಪಂದ್ಯಾವಳಿ [ 13-09-2019 ರಿಂದ 15-09-2019 ರವರೆಗೆ ಉಡುಪಿ ಜಿಲ್ಲೆಯಲ್ಲಿ ] | -- |
| 07 | ರಾಜ್ಯ ಮಟ್ಟದ 14 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ಅಥ್ಲೆಟಿಕ್ಸ್ ಕ್ರೀಡಾಕೂಟ[ದಿನಾಂಕ 03-11-2018 ರಿಂದ 04-11-2018 ರವರೆಗೆ ತುಮಕೂರು ಜಿಲ್ಲೆ] | ಪ್ರೋ ಇಂಡಿಯಾ ಸೀನಿಯರ್ ರಾಷ್ಟ್ರೀಯ ಮೊಯ್‌ಥಾಯ್ ಪಂದ್ಯಾವಳಿ [ 20-11-2019 ರಿಂದ 24-11-2019 ರವರೆಗೆ ಮಂಗಳೂರಿನಲ್ಲಿ ] | -- |

| | | | |
|---|---|---|---|
| 08 | -- | ಅಖಿಲ ಭಾರತ ಅಂತರ್ ಯೂನಿವರ್ಸಿಟಿ ಕಬಡ್ಡಿ ಪಂದ್ಯಾವಳಿ [ 18-12-2019 ರಿಂದ 21-12-2019 ರವರೆಗೆ ಉಡುಪಿ ಜಿಲ್ಲೆಯಲ್ಲಿ] | -- |
| 09 | -- | ಅಖಿಲ ಭಾರತ ಅಂತರ್ ಯೂನಿವರ್ಸಿಟಿ ಅಥ್ಲಿಟಿಕ್ಸ್ ಪಂದ್ಯಾವಳಿ [ ದಿನಾಂಕ 02-01-2020 ರಿಂದ 06-01-2020 ರವರೆಗೆ, ದಕ್ಷಿಣ ಕನ್ನಡ ಜಿಲ್ಲೆ] | -- |
| 10 | - | 15ನೇ ರಾಜ್ಯ ಮಟ್ಟದ ಎಂಟಿಬಿ ಸೈಕ್ಲಿಂಗ್ ಪಂದ್ಯಾವಳಿ [ ದಿನಾಂಕ 14-09-2019 ರಿಂದ 15-09-2019 ರವರೆಗೆ ವಿಜಯಪುರ ಜಿಲ್ಲೆ] | -- |
| 11 | -- | 20ನೇ ರಾಜ್ಯ ಮಟ್ಟದ ಈಜು ಪಂದ್ಯಾವಳಿ [ ದಿನಾಂಕ 11-12-2019 ರಿಂದ 14-12-2019 ರವರೆಗೆ, ಮಂಡ್ಯ ಜಿಲ್ಲೆ] | -- |
| 12 | -- | ಅಂಗವಿಕಲರ ರಾಜ್ಯ ಮಟ್ಟದ ಕ್ರೀಡಾಕೂಟ [ ದಿನಾಂಕ 05-03-2020 ರಿಂದ 08-03-2020 ರವರೆಗೆ ಮೈಸೂರು ಜಿಲ್ಲೆಯಲ್ಲಿ] | -- |
| 13 | | ರಾಜ್ಯಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ, [ದಿನಾಂಕ:27-02-2020 ರಿಂದ 01-03-2020 ರವರೆಗೆ ಧಾರವಾಢ ಜಿಲ್ಲೆಯಲ್ಲಿ] | |